ಸೊಸೆಯಾಗಿ ಸ್ವೀಕರಿಸುತ್ತೇನೆ. ನೀವು ಉದಾರ ಮನಸ್ಸಿನಿಂದ 'ಹೂಂ ಅನ್ನಬೇಕು' ಎಂದರು.

ಪುರುಷೋತ್ತಮರಾಯರ ಮಾತುಗಳಿಂದ ನಾರಾಯಣರಾಯರ ಕಣ್ಣಾಲಿಗಳು ತುಂಬಿ ಬಂದವು. ಬಾಗಿಲ ಮರೆಯಲ್ಲಿ ನಿಂತು ಈ ಮಾತುಗಳನ್ನು ಆಲಿಸುತ್ತಿದ್ದ ಲಕ್ಷ್ಮೀಬಾಯಿ ದೇವರ ಕೋಣೆಗೆ ಧಾವಿಸಿ ತುಪ್ಪದ ದೀಪ ಹಚ್ಚಿದಳು.

'ರಾಯರೇ, ನಿಮ್ಮ ಇಚ್ಛೆಯೇ ನಮ್ಮ ಇಚ್ಛೆ. ನಮ್ಮಿಬ್ಬರ ಮನೆತನಗಳಲ್ಲಿ ಪರಂಪರಾಗತ ನಡೆದು ಬಂದ ಬಾಂಧವ್ಯ, ಪ್ರೀತಿ–ವಿಶ್ವಾಸ ಚಿರಸ್ಥಾಯಿಯಾಗಿರಲಿ. ನಿಮ್ಮ ಸೊಸೆಯಾಗುವುದು ನಮ್ಮ ಮಗಳ ಭಾಗ್ಯವೆಂದೇ ಭಾವಿಸುತ್ತೇನೆ' ಎಂದು ನಾರಾಯಣರಾಯರು ಕೈಯಲ್ಲಿದ್ದ ಮೊಹರನ್ನು ಶ್ರದ್ಧೆಯಿಂದ ಕಣ್ಣಿಗೊತ್ತಿಕೊಂಡರು.

## ಲಕ್ಷ್ಮಣರಾವ್ ಸರ್‌ದೇಸಾಯಿ (1904–1986)

ಪೋರ್ಚುಗೀಸ್ ಭಾಷೆಯಲ್ಲಿ ಅತ್ಯುನ್ನತ ಪದವಿ ಪಡೆದ ಲಕ್ಷ್ಮಣರಾವ್ ಗೋವೆಯಲ್ಲಿ ಮೂರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಅವುಗಳ ನಿರ್ದೇಶಕರಾಗಿದ್ದರು. ನವದೆಹಲಿ, ಮುಂಬಯಿ ಆಕಾಶವಾಣಿಯಲ್ಲಿ ಸೇವೆ ಸಲ್ಲಿಸಿ ಗೋವೆಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಒಂದು ವರ್ಷ ಸೆರೆಮನೆಯ ಸುಖ ಕಂಡಿದ್ದಾರೆ. ಕೊಂಕಣಿ ಭಾಷೆ ಉಳಿಸುವ ಆಂದೋಲನದಲ್ಲಿ ಸಕ್ರಿಯರಾಗಿದ್ದರು.

ಪೋರ್ಚುಗೀಸ, ಮರಾಠಿ, ಕೊಂಕಣಿ ಭಾಷೆಯಲ್ಲಿ ನೂರಾರು ಲೇಖನ, ಕತೆ, ಪ್ರಬಂಧ, ವಿಮರ್ಶೆ ಪ್ರಕಟಿಸಿದ್ದಾರೆ. ಇವರು 700 ಕತೆಗಳನ್ನು ಬರೆದಿದ್ದಾರೆಂದು ಅಂದಾಜಿಸಲಾಗಿದೆ. ಮರಾಠಿಯಲ್ಲಿ ಇವರ 15 ಕಥಾಸಂಕಲನ, ಒಂದು ಕಾದಂಬರಿ, ವ್ಯಕ್ತಿಚಿತ್ರಗಳು ಪ್ರಕಟವಾಗಿವೆ. ಪುಸ್ತಕ ರೂಪದಲ್ಲಿ ಬರದ ನೂರಾರು ಕತೆ, ಲೇಖನಗಳಿವೆ.

ಇಲ್ಲಿರುವ 'ಮೊಹರು' ಕತೆ 1950ರಲ್ಲಿ ನ್ಯೂಯಾರ್ಕಿನ 'ನ್ಯೂಯಾರ್ಕ್ ಹೆರಾಲ್ಡ್ ಟ್ರಿಬ್ಯೂನ್' ಪತ್ರಿಕೆ ನಡೆಸಿದ ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿದೆ.

## ಶಾ.ಮಂ. ಕೃಷ್ಣರಾಯ

ಮೂಲತಃ ಉತ್ತರ ಕನ್ನಡ ಜಿಲ್ಲೆಯ ಅಂಕೋಲೆಯವರಾದ ಶಾ.ಮಂ. ಕೃಷ್ಣರಾಯರು ನಾಟಕ, ಕತೆ, ಮಕ್ಕಳ ಸಾಹಿತ್ಯ, ಪ್ರವಾಸ ಕಥನ, ವ್ಯಕ್ತಿಚಿತ್ರ, ಜೀವನ ಚರಿತ್ರೆ, ಸಂಪಾದನೆ ಹಾಗೂ ಅನುವಾದ ಪ್ರಕಾರಗಳಲ್ಲಿ 90ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವರು ಕೊಂಕಣಿ, ಮರಾಠೀ ಭಾಷೆಗಳ ಕೆಲವು ಅತ್ಯುತ್ತಮ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಆಪ್ತ ವಲಯದಲ್ಲಿ ಶಾ.ಮಂ. ಎಂದೇ ಗುರುತಿಸಿಕೊಳ್ಳುವ ಕೃಷ್ಣರಾಯರಿಗೆ ಕನ್ನಡದ ಪ್ರಸಿದ್ಧ ಲೇಖಕರಾದ ಅ.ನ.ಕೃ., ತ.ರಾ.ಸು., ಬೀಚಿ ಅವರೊಂದಿಗೆ ದೀರ್ಘ ಕಾಲದ ಆಪ್ತ ಒಡನಾಟವಿತ್ತು.

ಶಾ.ಮಂ. ಹುಟ್ಟಿದ್ದು ಬೆಳಗಾವಿಯಲ್ಲಿ. ತಮ್ಮ ಶಾಲಾ ಶಿಕ್ಷಣವನ್ನು ಶಿರಸಿ, ಸಿದ್ದಾಪುರದಲ್ಲಿ ನಡೆಸಿ, ಮೈಸೂರು ವಿಶ್ವವಿದ್ಯಾಲಯದ ಬಿ.ಎಡ್., ಎಂ.ಎ. ಪದವಿ ಪಡೆದು ದಶಕಗಳ ಕಾಲ ಗೋವೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ. ಅಲ್ಪಾವಧಿಗೆ ಪತ್ರಿಕೆಗಳ ಸಂಪಾದಕರಾಗಿಯೂ ದುಡಿದಿದ್ದಾರೆ.